ಇಲಾಖೆ / ವಿಷಯ : DEPARTMENT / SUBJECT :

ಪತ್ರಿಕೆಯ ಹೆಸರು : NAME OF THE NEWSPAPER :

ದಿನಾಂಕ : DATE : 11/10/2019

5 ಲಕ್ಷ ರು. ಪರಿಹಾರದ ಜತೆಗೆ ಹೆಚ್ಚಿನ ಪರಿಹಾರ ನೀಡುವಂತೆ ಪ್ರತಿಪಕ್ಷದಿಂದ ಆಗ್ರಹ

# ಪ್ರವಾಹ: ಮೇಲ್ಮನೆಯಲ್ಲಿ ವಾಕ್ ಪ್ರಹಾರ

**ವಿಧಾನ ಪರಿಷತ್:** ರಾಜ್ಯದಲ್ಲಿ ಎದುರಾಗಿರುವ ಪ್ರವಾಹ ಪರಿಸ್ಥಿತಿ ಕುರಿತು ಚರ್ಚೆ ನಡೆಸಬೇಕೆಂದು ವಿಧಾನ ಪರಿಷತ್ತಿನಲ್ಲಿ ಪ್ರತಿಪಕ್ಷದ ಸದಸ್ಯರು ಪಟ್ಟು ಹಿಡಿದ ಕಾರಣ ಆಡಳಿತ ಪಕ್ಷದ ಸದಸ್ಯರ ಜತೆ ಮಾತಿನ ಪ್ರಹಾರ ನಡೆಸಿದರು. ಬಳಿಕ ನಿಯಮ 68ರ ಅಡಿ ಚರ್ಚೆ ನಡೆಸಲು ಅವಕಾಶ ನೀಡಲು ಸಭಾಪತಿ ಪ್ರತಾಪ್ ಚಂದ್ರಶೆಟ್ಟಿ ಅವಕಾಶ ನೀಡಿದರು.

ಗುರುವಾರ ನಡೆದ ವಿಧಾನ ಪರಿಷತ್‌ನ ಕಲಾಪದ ವೇಳೆ ಪ್ರಶ್ನಾವಳಿ ಕೈಗೆತ್ತಿಕೊಳ್ಳುವ ಮುನ್ನ ರಾಜ್ಯದಲ್ಲಿ ನೆರೆ ಪರಿಸ್ಥಿತಿ ಕುರಿತು ಚರ್ಚೆಗೆ ಅವಕಾಶ ಮಾಡಿಕೊಡಲು ಪ್ರತಿಪಕ್ಷದ ಸದಸ್ಯರು ಆಗ್ರಹಿಸಿದರು. ಕಾಂಗ್ರೆಸ್ ಸದಸ್ಯರು ಪಟ್ಟು ಹಿಡಿದರೆ ನಿಯಮ 68ರ ಅಡಿ ಚರ್ಚೆ ನಡೆಸಲು ಅವಕಾಶ ನೀಡಬೇಕು ಎಂದು ಆಡಳಿತ ಪಕ್ಷದ ಸದಸ್ಯರು ಸಭಾಪತಿ ಅವರಲ್ಲಿ ಮನವಿ ಮಾಡಿದಾಗ ಮಾತಿನ ಚಕಮಕಿ ನಡೆಯಿತು.

ಸಂತಾಪ ಸೂಚನೆ ವೇಳೆ ಮಾತನಾಡಿದ ಪ್ರತಿಪಕ್ಷದ ನಾಯಕ ಎಸ್.ಆರ್.ಪಾಟೀಲ್, ರಾಜ್ಯದಲ್ಲಿ ಸುಮಾರು 118 ವರ್ಷಗಳ ನಂತರ ಕಳೆದ ಆಗಸ್ಟ್‌ನಲ್ಲಿ ಜಲಪ್ರವಾಹ ಉಂಟಾಗಿ, ಕರ್ನಾಟಕದ 22 ಜಿಲ್ಲೆಗಳ 103ಕ್ಕೂ ಹೆಚ್ಚು ತಾಲೂಕುಗಳು ಪ್ರವಾಹದಲ್ಲಿ ಮುಳುಗಿವೆ. ಲಕ್ಷಾಂತರ ಮಂದಿ ದಿನ ಬೆಳಗಾಗುವಷ್ಟರಲ್ಲಿ ಬೀದಿಗೆ ಬಿದ್ದಿದ್ದಾರೆ. ಹೀಗಾಗಿ ನೆರೆ ಪರಿಹಾರದಲ್ಲಿ ಯಾವುದೇ ರಾಜಕೀಯ ಮಾಡದೆ, ನಿರಾಶ್ರಿತರ ನೆರವಿಗೆ ಧಾವಿಸಬೇಕಾದದ್ದು ನಮ್ಮ ಜವಾಬ್ದಾರಿ ಎಂದರು.



ನೆರೆ ಹಾವಳಿಯಿಂದಾಗಿ ಒಂದು ಕಡೆ ಮನೆ ಕಳೆದುಕೊಂಡ ಲಕ್ಷಾಂತರ ಜನತೆ ಗಂಜಿ ಕೇಂದ್ರದಲ್ಲಿ ವಾಸವಾಗಿದ್ದರೆ, ಮತ್ತೊಂದೆಡೆ ಸುಮಾರು 25ಲಕ್ಷಕ್ಕೂ ಹೆಚ್ಚು ಕೃಷಿ ಭೂಮಿ ಸರ್ವನಾಶವಾಗಿದೆ. ಈ ಕೃಷಿ ಬೆಳೆಗಳ ನಾಶಕ್ಕೆ ವೈಜ್ಞಾನಿಕವಾದಂತಹ ಪರಿಹಾರ ಒದಗಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಅವರು ಒತ್ತಾಯಿಸಿದರು.

ಬಳಿಕ ಇದಕ್ಕೆ ಉತ್ತರಿಸಿದ ಕಂದಾಯ ಸಚಿವ ಆರ್.ಅಶೋಕ, ಈ ಹಿಂದೆ ಶೇ.25ರಿಂದ 75ರಷ್ಟು ಹಾನಿಗೊಳಗಾದ ಮನೆಗಳಿಗೆ ಒಂದು ಲಕ್ಷ ರು. ಪರಿಹಾರವೆಂದು ಘೋಷಿಸಲಾಗಿತ್ತು. ಆದರೆ, ಹಾನಿಗೊಳಗಾದ ಮನೆಗಳು ಯಾವಾಗ ಬೇಕಾದರು ಬೀಳುವ ಅಪಾಯವಿದೆ. ಹೀಗಾಗಿ ಶೇ.25ರಿಂದ ಮೇಲ್ಪಟ್ಟು ಹಾನಿಗೊಳಗಾದ ಎಲ್ಲ ಮನೆಗಳಿಗೂ 5 ಲಕ್ಷ ರು.ಪರಿಹಾರ ಒದಗಿಸಲು ನೆನ್ನೆ(ಬುಧವಾರ)ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ನೆರೆ ಹಾವಳಿಯಿಂದಾಗಿ ಮನೆ ಕಳೆದುಕೊಂಡಿರುವವರು ನೆರೆ ಪರಿಹಾರ ಪಡೆಯಲು ಅಧಿಕೃತ ದಾಖಲೆಗಳು ಕಡ್ಡಾಯವಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ನೆರೆ ಹಾವಳಿಯಿಂದಾಗಿ ಲಕ್ಷಾಂತರ ಮನೆಗಳು ನಾಶವಾಗಿ, ಜನರು ಬೀದಿಯಲ್ಲಿ ಇದ್ದಾರೆ. ಇಂತಹ ಸಂದರ್ಭದಲ್ಲಿ ಅಧಿಕೃತ ದಾಖಲೆಗಳು ಕೇಳುವುದು ಸರಿಯಲ್ಲ, ಹಾಗೂ ಹಲವು ಮಂದಿ ತಮ್ಮ ಮನೆಗಳಿಗೆ ಯಾವುದೇ ದಾಖಲೆ ಮಾಡಿಸಿರುವುದಿಲ್ಲ. ಹೀಗಾಗಿ ಮನೆ ಕಳೆದುಕೊಂಡ ಎಲ್ಲರಿಗೂ ಸೂಕ್ತ ಪರಿಹಾರ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ಇದಕ್ಕೆ ಪ್ರತಿಪಕ್ಷದ ನಾಯಕ ಎಸ್.ಆರ್.ಪಾಟೀಲ್, 5 ಲಕ್ಷ ರು. ಜತೆಗೆ ಹೆಚ್ಚಿನ ಪರಿಹಾರ ನೀಡುವಂತೆ ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಆರ್.ಅಶೋಕ, ಕಾಂಗ್ರೆಸ್ ದೇಶದಲ್ಲಿ 60 ವರ್ಷ ಆಡಳಿತ ನಡೆಸಿದೆ. ನಾವು ಇತ್ತೀಚೆಗಷ್ಟೆ ಆಡಳಿತ ನಡೆಸುತ್ತಿದ್ದೇವೆ ಎಂದರು. ಅಶೋಕ್ ಹೇಳಿಕೆಗೆ ಕಾಂಗ್ರೆಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ನೆರೆ ಪರಿಹಾರದ ವಿಷಯದಲ್ಲಿ ರಾಜಕೀಯ ಮಾಡಬೇಡಿ ಎಂದು ಆಗ್ರಹಿಸಿದರು.

ವಿಪಕ್ಷ ನಾಯಕ ಎಸ್.ಆರ್.ಪಾಟೀಲ್ ಬಳಿಕ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಬಂದಾಗ ದೇಶದಲ್ಲಿ ಕೇವಲ ಮೂರು ವಿಮಾನವಿತ್ತು. ಶೇ.75ಕ್ಕೂ ಹೆಚ್ಚು ಅನಕ್ಷರಸ್ಥರಿದ್ದರು, ಶೇ.70ರಷ್ಟು ಜನತೆಗೆ ಮನೆ ಇರಲಿಲ್ಲ, ಕೇವಲ ಒಂದು ಹೊತ್ತಿನ ಊಟವಿತ್ತು. ಇದೆಲ್ಲವೂ ನಮ್ಮ ಆಡಳಿತದಲ್ಲಿ ಬದಲಾವಣೆಯಾಗಿದೆ ಎಂದರು.

ಇದಕ್ಕೆ ಬಿಜೆಪಿ ಸದಸ್ಯ ರವಿಕುಮಾರ್, ಇಷ್ಟು ಮಾಡಿರುವ ನಿಮ್ಮನ್ನು ಜನತೆ ಯಾಕೆ ಮನೆಗೆ ಕಳುಹಿಸಿದರು ಎಂದರು. ಇದರಿಂದ ಗದ್ದಲ ಉಂಟಾಯಿತು. ಈ ವೇಳೆ ಸಭಾಪತಿ ಮಧ್ಯಪ್ರವೇಶಿಸಿ, ಗದ್ದಲ ನಿಲ್ಲಿಸುವಂತೆ ಸೂಚಿಸಿ ನೆರೆ ಪರಿಹಾರದ ಚರ್ಚೆಗೆ ಅವಕಾಶ ಮಾಡಿಕೊಟ್ಟರು.



> ನೆರೆ ಹಾವಳಿಯಿಂದ ಜನತೆ ತತ್ತರಿಸಿಸುತ್ತಿದ್ದಾರೆ. ಇವರಿಗೆ ಸೂಕ್ತ ಪರಿಹಾರ ನೀಡುವ ನಿಟ್ಟಿನಲ್ಲಿ ಪಕ್ಷಭೇದ ಮರೆತು ಚರ್ಚೆಗೊಳಗಾಗಬೇಕೆ ಹೊರತು, ರಾಜಕೀಯ ಬೇಡ.
>
> -ಜಯಮಾಲಾ ಪರಿಷತ್ ಸದಸ್ಯೆ

## ಧ್ವನಿ ಹತ್ತಿಕ್ಕುವ ಕೆಲಸ

**ಬೆಂಗಳೂರು:** ಪ್ರತಿಪಕ್ಷಗಳನ್ನು ಹತ್ತಿಕ್ಕುವ ಕಾರ್ಯದಲ್ಲಿ ರಾಜ್ಯ ಸರಕಾರ ನಿರತವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ. ವಿಧಾನಸಭೆ ಪ್ರತಿಪಕ್ಷದ ನಾಯಕರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಹಿಂದೆಂದೂ ಕಂಡರಿಯದ ಪ್ರವಾಹ ಉಂಟಾಗಿದೆ. ಪ್ರವಾಹದಿಂದ 7 ಲಕ್ಷ ಜನ ಸಂತ್ರಸ್ತರಾಗಿದ್ದಾರೆ. 2 ಲಕ್ಷಕ್ಕೂ ಹೆಚ್ಚು ಮನೆ ನೆಲಸಮವಾಗಿವೆ. ಮಳೆಯಿಂದ 90 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಕೆಲವರು ನಾಪತ್ತೆಯಾಗಿದ್ದಾರೆ. ಕೆಲವರು ಆತ್ಮಹತ್ಯೆಗೂ ಗುರಿಯಾಗಿದ್ದಾರೆ. ರಾಜ್ಯದಲ್ಲಿ ಇಂತಹ ವಿಚಾರಗಳಿದ್ದರೂ ಕೇವಲ ಮೂರು ದಿನ ಮಾತ್ರ ಕಲಾಪ ಕರೆದಿರುವುದು ಸರಿಯಲ್ಲ ಎಂದರು. ನೆರೆ ಹಾಗೂ ಬರ ಸಂಬಂಧಿತ ವಿಚಾರಗಳ ಬಗ್ಗೆ ಕಾಂಗ್ರೆಸ್ ಪಕ್ಷ ಧ್ವನಿ ಎತ್ತಬೇಕಿದೆ. ನಿಯಮ 69ರಡಿ ನಿಲುವಳಿ ಸೂಚನೆಗೆ ಕೊಟ್ಟಿದ್ದೇನೆ. ಮಹತ್ವದ ವಿಷಯಗಳಿದ್ದರೆ ನಿಯಮದಡಿ ಚರ್ಚೆಗೆ ನೀಡಬೇಕು. ಇದು ನಿಯಮದಲ್ಲಿಯೇ ಹೇಳಿದೆ. ನಾವೇ ನಿಯಮಗಳನ್ನು ರೂಪಿಸಿಕೊಂಡಿದ್ದೇವೆ. ಒಂದು ಗಂಟೆ ಮುಂಚಿತವಾಗಿ ನೋಟಿಸ್ ನೀಡಬೇಕು. ನಾನು ಬೆಳಗ್ಗೆ ನೋಟಿಸ್ ನೀಡಿದ್ದರೂ,ಚರ್ಚೆಗೆ ಅವಕಾಶ ನೀಡಿಲ್ಲ, ಸ್ಪೀಕರ್ ಆರ್‌ಎಸ್‌ಎಸ್ ಕೈಗೊಂಬೆ ರೀತಿ ವರ್ತಿಸುತ್ತಿದ್ದಾರೆ ಎಂದರು. ಶೂನ್ಯವೇಳೆ ಪ್ರಶ್ನೋತ್ತರವೂ ಇಲ್ಲ. ನಾವು ಅನೇಕ ನಿಲುವಳಿಗೆ ಅವಕಾಶ ಕೊಟ್ಟಿದ್ದೇವೆ. ನಿಯಮಾವಳಿಯಂತೆ ಕೆಲಸ ನಡೆದುಕೊಂಡಿದ್ದೆವು. ರಮೇಶ್ ಕುಮಾರ್ ಅವರು ಎರಡು ಭಾರಿ ಸ್ಪೀಕರ್ ಆಗಿದ್ದವರು. ಆದರೆ ಈಗಿನ ಸ್ಪೀಕರ್ ನಿಯಮ ಗಾಳಿಗೆ ತೂರಿದ್ದಲ್ಲದೆ ಡಿಕ್ಟೇಟರ್ ರೀತಿ ನಡೆದುಕೊಳ್ಳುತ್ತಿದ್ದಾರೆ. ಹಣಕಾಸು ಮಸೂದೆ ಮಂಡನೆ ಮಾಡಿದ್ದಾರೆ. ಇದು ಪ್ರಜಾಪ್ರಭುತ್ವದ ಕಗ್ಗೊಲೆ. ಪ್ರತಿಪಕ್ಷ ಹತ್ತಿಕ್ಕುವ ದುಸ್ಸಾಹಸ ಎಂದು ಆರೋಪಿಸಿದರು.